ಆ) ಭೂಸ್ವಾಧೀನಪಡಿಸಿಕೊಂಡ ಹಿಡುವಳಿ ಜಮೀನಿನ 1139 ಮಂದಿ ರೈತರಿಗೆ ರೂ. 116.47 ಕೋಟಿ ಪರಿಹಾರವನ್ನು ವಿತರಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

ಪರಿಹಾರ ಪಡೆದ ರೈತರ ಸಂಖ್ಯೆ 1139

1) ಭೂಪರಿಹಾರ ರೂ. 107.56 ಕೋಟಿ

2) ಮಾಲ್ಕಿ ಮತ್ತು ಕಟ್ಟಡ ಮೌಲ್ಯ ರೂ. 8.20 ಕೋಟಿ

3) ಗ್ರಾಮಠಾಣ ನಿವೇಶನ

ಮನೆ ಬಾಬ್ತು ಪರಿಹಾರ ರೂ. 0.71 ಕೋಟಿ

ಒಟ್ಟು ರೂ. 116.47 ಕೋಟಿ

ಇ) ಕೇಂದ್ರ ಸರ್ಕಾರವು ಭಾರತೀಯ ವೈಮಾನಿಕ ಪ್ರಾಧಿಕಾರದ ಮೂಲಕ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಗಮದಲ್ಲಿನ ಉದ್ದೇಶಿತ ಈಕ್ವಿಟಿ ಷೇರು ಬಂಡವಾಳದ ಶೇಕಡಾ 13 ರಷ್ಟರ ಮೊತ್ತವನ್ನು (ಸುಮಾರು 40–00 ಕೋಟಿ ರೂ.ಗಳೂ) ನೀಡಲಿದೆ.

ರಾಜ್ಯದಲ್ಲಿ ಹೊಸ ಪಶು ಚಿಕಿತ್ಸಾಲಯ ಆಸ್ಪತ್ರೆಗಳು

268 (131): ಶ್ರೀ ಷಡಾಕ್ಷರಿ ಕೆ. (ತಿಪಟೂರು) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಪಶು ಚಿಕಿತ್ಸಾಲಯಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ;

ಆ) ಹಾಗಿದ್ದಲ್ಲಿ ಎಷ್ಟು ಪಶು ಚಿಕಿತ್ಸಾಲಯಗಳನ್ನು ತೆರೆಯಲಾಗುವುದು?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಮೀನುಗಾರರಿಗೆ ಮನೆಗಳ ಹಂಚಿಕೆ

269 (132): ಶ್ರೀ ಷಡಾಕ್ಷರಿ ಕೆ. (ತಿಪಟೂರು) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಡ ಮೀನುಗಾರರಿಗೆ ಮತ್ಸ್ಯಾಶ್ರಯ ಯೋಜನೆಯಲ್ಲಿ ಕಳೆದ ವರ್ಷ ನೀಡಿರುವ ಮನೆಗಳು ಎಷ್ಟು;

ಆ) 2003–04ನೇ ಸಾಲಿನಲ್ಲಿಯೂ ಸಹ ಈ ಯೋಜನೆಯನ್ನು ಮುಂದುವರೆಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಇ) ಹಾಗಿದ್ದಲ್ಲಿ ಎಷ್ಟು ಮನೆಗಳನ್ನು ನೀಡಲಾಗಿದೆ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಬಡ ಮೀನುಗಾರರಿಗೆ ಮತ್ಸ್ಯಾಶ್ರಯ ಯೋಜನೆ 2ರಡಿಯಲ್ಲಿ 2002–03ನೇ ಸಾಲಿನಲ್ಲಿ 2000 ಮನೆಗಳು ಮಂಜೂರಾಗಿದೆ.

ಆ) ಹೌದು.

ಇ) 2003–04ನೇ ಸಾಲಿನಲ್ಲಿ 1000 ಮನೆಗಳನ್ನು ಮಂಜೂರು ಮಾಡಲಾಗಿದೆ.